# "ಆಧುನಿಕ ಪರಿಕಲ್ಪನೆಯಲ್ಲಿ ಕರ್ನಾಟಕ ಶಾಸ್ತ್ರೀಯ ಸಂಗೀತ" – ಒಂದು ಚಿಂತನೆ

ಡಾ॥ ಮಂಜುಳಾ ಎಂ. ಆರ್.
ಅತಿಥಿ ಉಪನ್ಯಾಸಕರು
ಪ್ರದರ್ಶನ ಕಲಾ ವಿಭಾಗ, ಬೆಂಗಳೂರು ವಿಶ್ವವಿದ್ಯಾಲಯ
ಜ್ಞಾನಭಾರತಿ, ಬೆಂಗಳೂರು, ಕರ್ನಾಟಕ, ಭಾರತ
**E Mail: manjulamusic@gmail.com**

## ಅಮೂರ್ತ :

ಪ್ರಪಂಚದಾದ್ಯಂತ ಸಾಂಸ್ಕೃತಿಕ ಕಲೆಗಳಲ್ಲಿ ಸಂಗೀತವು ಒಂದು ಮುಖ್ಯವಾದ ಕಲಾಪ್ರಕಾರವಾಗಿದೆ. ಲಲಿತಕಲೆಗಳಲ್ಲಿ ಶ್ರೇಷ್ಠವೆಂದು ಪರಿಗಣಿಸಲಾದ ಈ ಕಲೆಯು ಆಯಾ ದೇಶ, ಕಾಲ, ಜನಜೀವನ ಶೈಲಿ, ಪರಿಸರ, ಹವಾಮಾನ, ಮುಂತಾದವುಗಳಿಂದ ಪ್ರಭಾವಿತವಾಗಿರುತ್ತದೆ. ಹೀಗಾಗಿ, ಯಾವುದೇ ದೇಶದ ಸಂಸ್ಕೃತಿಯನ್ನು ತಿಳಿಯಬೇಕಿದ್ದರೆ ಆ ದೇಶದ ಸಂಗೀತ ಮತ್ತು ಇತರ ಲಲಿತ ಕಲೆಗಳ ಕಡೆಗೆ ಗಮನ ಹರಿಸುವುದು ಮುಖ್ಯವಾಗುತ್ತದೆ. ಭಾರತೀಯ ಸಂಗೀತವೂ ಇದಕ್ಕೆ ಹೊರತಲ್ಲ. ವಿಸ್ತಾರವಾದ ಭಾರತ ದೇಶದಲ್ಲಿ `**ಅನೇಕತೆಯಲ್ಲಿ ಏಕತೆ**` ಎಂಬ ಸಂಸ್ಕೃತಿಯು ವಿಶಿಷ್ಟವಾದದ್ದು. ಇದಕ್ಕೆ ಅನುಗುಣವಾಗಿ ಭಾರತದ ಎಲ್ಲ ರಾಜ್ಯಗಳಲ್ಲಿಯೂ ಅವುಗಳದ್ದೇ ಆದ ವಿಶೇಷವಾದ ಸಂಗೀತ ಪ್ರಕಾರಗಳು ಕಂಡುಬರುತ್ತವೆ. ಅವುಗಳಲ್ಲಿ ಶಾಸ್ತ್ರೀಯ, ಜಾನಪದ, ಧಾರ್ಮಿಕ, ಲಘು ಶಾಸ್ತ್ರೀಯ, ಸುಗಮಸಂಗೀತ, ಚಲನಚಿತ್ರ ಸಂಗೀತ, ಮುಂತಾದ ಅನೇಕ ಪ್ರಕಾರಗಳ ಸಂಗೀತವನ್ನು ಕಾಣಬಹುದು. ಭಾರತೀಯ ಶಾಸ್ತ್ರೀಯ ಸಂಗೀತದ ಪರಿಧಿಯಲ್ಲಿ ಮುಖ್ಯವಾಗಿ ಉತ್ತರಭಾರತದಲ್ಲಿ ಔತ್ತರೇಯ ಸಂಗೀತ ಪದ್ಧತಿ- ಎಂದರೆ, ಹಿಂದೂಸ್ತಾನಿ ಸಂಗೀತ ಪದ್ಧತಿ; ದಕ್ಷಿಣ ಭಾರತದಲ್ಲಿ ದಕ್ಷಿಣಾದಿ ಸಂಗೀತ -ಎಂದರೆ ಕರ್ನಾಟಕ ಸಂಗೀತ ಪದ್ಧತಿ ರೂಢಿಯಲ್ಲಿದೆ. ಪ್ರಸ್ತುತ, ಕರ್ನಾಟಕ ಶಾಸ್ತ್ರೀಯ ಸಂಗೀತ ಪದ್ಧತಿಯ ಬಗ್ಗೆ ಈ ಲೇಖನ ಗಮನ ಹರಿಸುತ್ತದೆ. ಆಧುನಿಕ ಯುಗದಲ್ಲಿ ನಮ್ಮ ಶಾಸ್ತ್ರೀಯ ಸಂಗೀತದ ಪರಿಕಲ್ಪನೆ ಹೇಗೆಲ್ಲ ಬೆಳೆದಿದೆ, ಮಾರ್ಪಾಡು ಹೊಂದುತ್ತಿದೆ ಎಂಬ ವಿಷಯದ ಬಗ್ಗೆ ಕೆಲವು ಪರಿವೀಕ್ಷಣೆಗಳನ್ನು ಹಂಚಿಕೊಳ್ಳುವ ಪ್ರಯತ್ನ ಈ ಲೇಖನದಲ್ಲಿ ಮಾಡಲಾಗಿದೆ.

**ಮೂಲ ಪದಗಳು**:

ಶಾಸ್ತ್ರೀಯ ಸಂಗೀತ, ಸಂಪ್ರದಾಯ, ಆಧುನಿಕ ಬೆಳವಣಿಗೆ, ಪ್ರಯೋಗ, ಪರಂಪರೆ.

## ಪೀಠಿಕೆ :

ಅನೇಕ ಶತಮಾನಗಳಿಂದ ಬೆಳೆದುಬಂದ ಭಾರತೀಯ ಸಂಗೀತಕ್ಕೆ ತನ್ನದೇ ಆದ ಒಂದು ದೊಡ್ಡ ಇತಿಹಾಸವಿದೆ. ವೇದಗಳ ಕಾಲದಿಂದ ಪ್ರಾರಂಭಿಸಿ ಇಂದಿನ ಆಧುನಿಕ ಯುಗದವರೆಗೂ ಹಂತ ಹಂತವಾಗಿ ಬೆಳೆದು, ಇನ್ನೂ ತನ್ನ ಬಾಹುಳ್ಯವನ್ನು ವಿಸ್ತರಿಸಿಕೊಳ್ಳುತ್ತಲೇ ಇದೆ. 13 ನೆಯ ಶತಮಾನದವರೆಗೂ ಕೇವಲ ಭಾರತೀಯ ಸಂಗೀತವಾಗಿ ವಿಕಾಸ ಹೊಂದಿದ್ದ ಸಂಗೀತವು, 13 ನೆಯ ಶತಮಾನದ ನಂತರ ಉತ್ತರ ಹಾಗೂ ದಕ್ಷಿಣವೆಂದು ಕವಲೊಡೆದು ಉತ್ತರದಲ್ಲಿ ಹಿಂದೂಸ್ತಾನಿ, ದಕ್ಷಿಣದಲ್ಲಿ ಕರ್ನಾಟಕ ಸಂಗೀತವೆಂದು ಪ್ರಸಿದ್ಧಿ ಹೊಂದಿರುವುದು ಸರ್ವವಿದಿತವಾದ ಸಂಗತಿ.

ಕರ್ನಾಟಕ ಶಾಸ್ತ್ರೀಯ ಸಂಗೀತದಲ್ಲಿ ಅನೇಕ ರೀತಿಯ ರಚನಾ ಪ್ರಕಾರಗಳು ಶತಮಾನಗಳಿಂದ ರಚಿತವಾಗಿವೆ. ಅವುಗಳಲ್ಲಿ ಹಲವು ಈಗ ಕಣ್ಮರೆಯಾಗಿರುವುದೂ ಉಂಟು. ಪ್ರಚಲಿತವಿರುವ ವಿವಿಧ ರಚನೆಗಳ ಪೈಕಿ ಹೆಚ್ಚಿನ ಜನಪ್ರಿಯತೆಯನ್ನು ಪಡೆದಿರುವ ಪ್ರಕಾರವೆಂದರೆ "ಕೃತಿ". ನಂತರದಲ್ಲಿ ಹರಿದಾಸರ ಕೀರ್ತನೆಗಳು, ಪ್ರಸಿದ್ಧ ವಾಗ್ಗೇಯಕಾರರ ತಿಲ್ಲಾನಗಳು, ವರ್ಣಗಳು, ಮುಂತಾದವು ಕಚೇರಿಗಳಲ್ಲಿ ಸ್ಥಾನ ಪಡೆದಿವೆ. ಇವೆಲ್ಲವುಗಳ ಬಳಕೆಯಲ್ಲಿ ಇಂದಿನ ಕಲಾವಿದರ ಪಾತ್ರ ಎಷ್ಟು ಮತ್ತು ಹೇಗಿದೆ ಎನ್ನುವುದು ವಿಶ್ಲೇಷಣಾರ್ಹ. ಈ ಲೇಖನದಲ್ಲಿ ವಿವಿಧ ರಚನಾ ಪ್ರಕಾರಗಳ ಬಳಕೆಯು ಇಂದಿನ ಕಚೇರಿಗಳಲ್ಲಿ ಹಾಗೂ ಇತರ ವೇದಿಕೆ ಕಾರ್ಯಕ್ರಮಗಳಲ್ಲಿ ಯಾವ ರೀತಿ ಆಗುತ್ತಿದೆ ಎನ್ನುವುದರ ಬಗ್ಗೆ ಕೆಲವು ಮಾಹಿತಿಗಳನ್ನು ಹಲವಾರು ಆಕರಗಳಿಂದ, ಮೂಲಗಳಿಂದ ಸಂಗ್ರಹಿಸಿ ಚಿಂತನೆ ಮಾಡಲಾಗಿದೆ. ಸಂಗೀತ ಸಮ್ಮೇಳನಗಳ ಸ್ಮರಣ ಸಂಚಿಕೆಗಳು, ಜರ್ನಲ್ ಗಳು, ವಿವಿಧ ಸಂಗೀತ ಶಾಸ್ತ್ರಜ್ಞರ ಭಾಷಣಗಳು, ಹಿರಿಯ ಸಂಗೀತ ವಿದ್ವಾಂಸರ ಅಭಿಪ್ರಾಯಗಳು, ಸಂದರ್ಶನಗಳೇ ಮುಂತಾದವುಗಳು ಈ ಲೇಖನಕ್ಕೆ ಆಕರಗಳಾಗಿವೆ.

## ಸಾಹಿತ್ಯಾವಲೋಕನ:

ಮುಖ್ಯವಾಗಿ ಈ ಲೇಖನವು ವಿಶ್ಲೇಷಣಾತ್ಮಕವಾದ್ದರಿಂದ ವಿವಿಧ ಕಲಾವಿದರ ಅಭಿಪ್ರಾಯಗಳ ಜೊತೆಗೆ ಕನ್ನಡ ಸಂಸ್ಕೃತಿ ನಿರ್ದೇಶನಾಲಯ ಪ್ರಕಟಿಸಿರುವ **"ಗಾನಕಲಾ ಮಂಜರಿ" ಸಂಪುಟ 1 ಮತ್ತು 2**, ಕರ್ನಾಟಕ ಗಾನಕಲಾ ಪರಿಷತ್ ಪ್ರಕಟಿಸಿರುವ **ಸಂಪುಟ 3**ನ್ನು ಮೂಲ ಆಕರವಾಗಿ ಬಳಸಿಕೊಳ್ಳಲಾಗಿದೆ. ಈ ಸಂಪುಟಗಳಲ್ಲಿ ಅನೇಕ ಹಿರಿಯ ಸಂಗೀತ ವಿದ್ವಾಂಸರು, ಶಾಸ್ತ್ರಜ್ಞರು ತಮ್ಮ ಲೇಖನಗಳಲ್ಲಿ ವ್ಯಕ್ತಪಡಿಸಿರುವ ವಿಚಾರಧಾರೆಗಳು ಈ ಲೇಖನದ ಶೀರ್ಷಿಕೆಗೆ ಸ್ಫೂರ್ತಿಯಾಗಿದೆ.

## ಅಧ್ಯಯನದ ವಿಧಾನ:

ಈ ಲೇಖನದಲ್ಲಿ ಅನುಸರಿಸಿರುವ ಅಧ್ಯಯನ ವಿಧಾನವು ಅನೇಕ ಹಿರಿ-ಕಿರಿಯ ಸಂಗೀತ ವಿದ್ವಾಂಸರ ಹಾಗೂ ಶ್ರೋತೃಗಳ ಸಂದರ್ಶನಗಳನ್ನು ಮತ್ತು ವಿವಿಧ ಗ್ರಂಥಗಳ ಚಿಂತನಾ ಲೇಖನಗಳನ್ನು ಆಧರಿಸಿದ್ದು, ವಿಶ್ಲೇಷಣಾತ್ಮಕವಾಗಿ ಇರುತ್ತದೆ.

## ಲೇಖನದ ಮುಖ್ಯ ಭಾಗ:

ಕರ್ನಾಟಕ ಶಾಸ್ತ್ರೀಯ ಸಂಗೀತವು ತನ್ನ ಉಚ್ಛ್ರಾಯ ಸ್ಥಿತಿಯನ್ನು ತಲುಪಿದ್ದು ಸುಮಾರು 18 ನೆಯ ಶತಮಾನದಿಂದೀಚೆಗೆ ಎನ್ನುವುದು ಅನೇಕ ಹಿರಿಯ ವಿದ್ವಾಂಸರ ಹಾಗೂ ಶಾಸ್ತ್ರಜ್ಞರ ಅಭಿಪ್ರಾಯವಾಗಿದೆ. ಪ್ರಬಂಧಗಳೇ ಮೊದಲಾದ ಅನೇಕ ಪ್ರಾಚೀನ ರಚನಾ ಪ್ರಕಾರಗಳು ಪ್ರಚಲಿತವಿದ್ದ ಕಾಲದಲ್ಲಿ, "ಕೃತಿ" ಎಂಬ ಪ್ರಕಾರವನ್ನು ರಚಿಸಿ ಜನಪ್ರಿಯಗೊಳಿಸಿದ ಕೀರ್ತಿ ಸಂಗೀತದ ತ್ರಿಮೂರ್ತಿಗಳೆಂದೇ ಪ್ರಸಿದ್ಧರಾದ ಸಂತ ತ್ಯಾಗರಾಜರು, ಶ್ಯಾಮಾಶಾಸ್ತ್ರಿಗಳು ಮತ್ತು ಮುತ್ತುಸ್ವಾಮಿ ದೀಕ್ಷಿತರಿಗೆ ಸಲ್ಲುತ್ತದೆ. 18ನೆಯ ಶತಮಾನದಲ್ಲಿ ಪ್ರಾರಂಭವಾದ ಈ ಪ್ರಕಾರವು ಸುಮಾರು 300 ವರ್ಷಗಳ ನಂತರವೂ ಅದೇ ಬೇಡಿಕೆಯನ್ನು ಕಚೇರಿಗಳಲ್ಲಿ ಉಳಿಸಿಕೊಂಡಿರುವುದು ಅದರ ಜನಪ್ರಿಯತೆಗೆ ಸಾಕ್ಷಿ. ಬಹುತೇಕ ಇಂದಿನ ಸಂಗೀತ ಕಚೇರಿಗಳಲ್ಲಿ ಸಿಂಹಪಾಲು ಕೃತಿ-ಗಳದ್ದೇ ಆಗಿರುತ್ತದೆ ಎಂದರೆ ಅತಿಶಯೋಕ್ತಿಯಲ್ಲ. ಕೃತಿಗಳು ಅತ್ಯಂತ ಜನಪ್ರಿಯವಾದ ರಚನೆಗಳಾಗಿರುವುದು ಇತ್ತೀಚಿನ ದಿನಗಳಲ್ಲಿ ಅವುಗಳ ಮೂಲ ಉದ್ದೇಶಕ್ಕೆ ಹಾಗೂ ವ್ಯಕ್ತಿತ್ವಕ್ಕೆ ಮಾರಕವೂ ಆಗಿದೆ ಎನ್ನುವುದು ಚಿಂತನಾರ್ಹ ಸಂಗತಿ.

ಪ್ರಸ್ತುತ ಸಮಯದಲ್ಲಿ ಕಾಣುತ್ತಿರುವ ಆಧುನಿಕ ಪ್ರಯೋಗವೆಂದರೆ, ಹಲವಾರು ಯುವ ಕಲಾವಿದರು, ಈ ಮೊದಲೇ ಶ್ರೇಷ್ಠ ವಾಗ್ಗೇಯಕಾರರು ರಚಿಸಿರುವ ಜನಪ್ರಿಯ ಕೃತಿಗಳನ್ನು ತಮ್ಮದೇ ಶೈಲಿಯ ಸ್ವರಸಂಯೋಜನೆಗಳೊಂದಿಗೆ ವಿಕೃತಗೊಳಿಸಿ ತಮ್ಮ ವಾಗ್ಗೇಯತ್ವವನ್ನು ಮೆರೆಸಲು ಪ್ರಯತ್ನ ಪಡುತ್ತಿರುವುದು. ಎಷ್ಟೋ ಬಾರಿ ಬೇಡದ ಸ್ವರಸಂಯೋಜನೆಗಳಷ್ಟೇ ಅಲ್ಲದೆ, ಕೃತಿಯ ಮೂಲ ರಾಗವನ್ನೇ ತಿರುಚಿ ತಮಗೆ ಬೇಕಾದ ಹಾಗೆ ಆ ರಾಗದಲ್ಲಿ ಇಲ್ಲದ ಸ್ವರಗಳನ್ನೂ ಬಲವಂತವಾಗಿ ಅದರಲ್ಲಿ ಅಡಕಿಸಿ, ಆ ಶಾಸ್ತ್ರೀಯ ಕೃತಿಗಳಿಗೆ ತಮ್ಮದೇ ಕಲ್ಪನೆಯ ಹಿನ್ನೆಲೆ ಸಂಗೀತವನ್ನೂ ಸೇರಿಸಿ ಹಾಡಿ, ನುಡಿಸಿ, ಜಾಲತಾಣಗಳಲ್ಲಿ ಹರಿಬಿಟ್ಟು ಜನಪ್ರಿಯತೆ ಸಂಪಾದಿಸುವ ಪ್ರವೃತ್ತಿ ಬೆಳೆಸಿಕೊಂಡಿರುವುದೂ ಕಾಣುತ್ತದೆ. ಯು ಟ್ಯೂಬ್, ಫೇಸ್ಬುಕ್, ಇನ್ಸ್ಟಾಗ್ರಾಂ ಮುಂತಾದ ಜಾಲತಾಣಗಳು ಈಗ ಬಹುತೇಕ ಇಂತಹ ಸಂಗೀತದಿಂದಲೇ ತುಂಬಿರುತ್ತವೆ. ಇಂಥ ವಿಕೃತ ಪ್ರಯತ್ನಗಳಿಗೆ ಈ ಜಾಲತಾಣಗಳಲ್ಲಿ ಒಂದಷ್ಟು "ಇಷ್ಟ"ಗಳು ಬಂದರಂತೂ ಮತ್ತಷ್ಟು ಕೃತಿಗಳನ್ನು ಅಂದಗೆಡಿಸಲು ಇಂಥವರಿಗೆ ಪ್ರೇರೇಪಣೆಯೂ ದೊರಕುವುದು ಮತ್ತೂ ಬೇಸರದ ವಿಚಾರ.

ಈ ವಿಚಾರದಲ್ಲಿ ಅನೇಕ ಹಿರಿಯ ವಿದ್ವಾಂಸರಿಗೆ ಬಂದ ಒಂದು ಸ್ವಾಭಾವಿಕವಾದ ಸಾತ್ವಿಕ ಕೋಪವೂ ಅವರನ್ನು ಸಂದರ್ಶನ ಮಾಡಿದಾಗ ನನಗೆ ಕಂಡುಬಂದದುಂಟು. ಸಂದರ್ಶಿಸಿದ ಪ್ರತಿಯೊಬ್ಬ ಹಿರಿಯರು, ಹಾಗೂ ಶಾಸ್ತ್ರೀಯತೆಯನ್ನು ಗೌರವಿಸುವ ಅನೇಕ ಕಿರಿಯ, ಯುವ ಸಂಗೀತಗಾರರೆಲ್ಲ ಧ್ವನಿಗೂಡಿಸಿದ ಒಂದೇ ವಿಚಾರವೆಂದರೆ, "ಪ್ರಯೋಗಶೀಲತೆ ಒಳ್ಳೆಯದೇ. ಆದರೆ ಇವರ ಪ್ರಯೋಗಕ್ಕೆ ನೂರಾರು ವರ್ಷಗಳಿಂದ ಎಲ್ಲ ಸಂಗೀತಗಾರರೂ ಹಾಡುತ್ತಾ, ನುಡಿಸುತ್ತಾ ಬಂದು ಜನಮನದಲ್ಲಿ ನಿಂತಿರುವ, ಜನಪ್ರಿಯವಾದ ಶಾಸ್ತ್ರೀಯ ಕೃತಿಗಳನ್ನು ಏಕೆ ಹಾಳು ಮಾಡಬೇಕು? ತಾವೇ ಸ್ವತಃ ರಚನೆಗಳನ್ನು ಮಾಡಿ ಪ್ರಯೋಗ ಮಾಡುವ ಧೈರ್ಯವೇಕೆ ಇಲ್ಲ?" ಎನ್ನುವುದು. ಈ ಪ್ರಕ್ರಿಯೆ ಹೀಗೇ ಮುಂದುವರೆದರೆ ಮುಂದಿನ ಪೀಳಿಗೆಯ ಚಿಕ್ಕ ವಿದ್ಯಾರ್ಥಿಗಳಿಗೆ ಆ ಕೃತಿಗಳ ಮೂಲರೂಪವೇ ಕಾಣದೆ ಗೊಂದಲವುಂಟಾಗಿ ದಿಕ್ಕು ತಪ್ಪಿಸುವುದಂತೂ ಖಂಡಿತ. ಸುಪ್ರಸಿದ್ಧ ಕೃತಿಗಳಾದ ತ್ಯಾಗರಾಜರ ಹಂಸನಾದ ರಾಗದ 'ಬಂಟು ರೀತಿ', ಅಭೇರಿ ರಾಗದ 'ನಗುಮೋಮು', ದೀಕ್ಷಿತರ ಹಂಸಧ್ವನಿ ರಾಗದ 'ವಾತಾಪಿ ಗಣಪತಿಂ', ಬೃಂದಾವನ ಸಾರಂಗದ 'ಶ್ರೀ ರಂಗಪುರವಿಹಾರ', ಇಂತಹ ವಿಚಿತ್ರ ಪ್ರಯೋಗಗಳಿಗೆ ಆಹಾರವಾದ ಉ ದಾಹರಣೆಗಳಾಗಿವೆ. ಪಟ್ಣಂ ಸುಬ್ರಹ್ಮಣ್ಯ ಅಯ್ಯರ್ ಅವರ ವಿಶ್ವ ಪ್ರಸಿದ್ಧ

ಕೃತಿ- ಕದನಕುತೂಹಲ ರಾಗದ 'ರಘುವಂಶ ಸುಧಾಂಬುಧಿ' ಯಂತೂ ಅದೆಷ್ಟು ಪ್ರಯೋಗಗಳಿಗೆ ಬಲಿಪಶುವಾಗಿ ನಲುಗಿದೆಯೋ ಎನ್ನುವುದು ಲೆಕ್ಕಕ್ಕೇ ಸಿಗುವುದಿಲ್ಲ! ಹುಡುಕುತ್ತ ಹೋದರೆ ಇಂತಹ ಇನ್ನೂ ಅನೇಕ ಕೃತಿಗಳು ದೊರಕುತ್ತವೆ.

ಇದೇ ರೀತಿ ಇಂದಿನ ಅನೇಕ ಯುವಕಲಾವಿದರಲ್ಲಿ ಬೆಳೆಯುತ್ತಿರುವ ಮತ್ತೊಂದು ಹೊಸ ಪ್ರವೃತ್ತಿ ಎಂದರೆ, 'ಹೊಸ ಹೊಸ ರಚನೆಗಳನ್ನು ಹಾಡಬೇಕು, ಹೊಸ ಹೊಸ ರಾಗಗಳನ್ನು ಹಾಡಬೇಕು' ಎನ್ನುವುದು. ಇದು ಖಂಡಿತವಾಗಿಯೂ ಸ್ವಾಗತಾರ್ಹ. ಆದರೆ, ವಿಸ್ತಾರಕ್ಕೆ ಅವಕಾಶವೇ ಇಲ್ಲದಂಥ ರಾಗಗಳಲ್ಲಿನ ಹೊಸ ರಚನೆಗಳನ್ನು ಆರಿಸಿಕೊಂಡು ದೀರ್ಘವಾದ ಆಲಾಪನೆಗೆ ಪ್ರಯತ್ನ ಪಡುವುದು; ಗ್ರಂಥಗಳಲ್ಲಿ ಕೇವಲ ಹೆಸರು, ಆರೋಹಣ-ಅವರೋಹಣಗಳ ಉಲ್ಲೇಖ ಇರುವ, ರಾಗ ಸ್ವರೂಪವೇ ಕಾಣದಂಥ ಜನ್ಯ ರಾಗಗಳಲ್ಲಿ ದೀರ್ಘ ಆಲಾಪನೆ ಮಾಡುವುದು; ಈ ಮೂಲಕ ತಮ್ಮ ವಿದ್ವತ್ ಪ್ರದರ್ಶನ ಮಾಡುತ್ತಿದ್ದೇವೆ ಎಂಬ ಭ್ರಮೆಯಲ್ಲಿ, ತಮ್ಮ ಸಂಗೀತವು ನಿಜವಾಗಿಯೂ ಶ್ರೋತೃಗಳ ಮನ ಮುಟ್ಟುತ್ತಿದೆಯೇ ಎನ್ನುವುದನ್ನೂ ಗಮನಿಸದೆ ಇರುವುದು, ಇದನ್ನೆಲ್ಲಾ ಕಂಡಾಗ ಶಾಸ್ತ್ರೀಯ ಸಂಗೀತದ ಮೂಲ ಉದ್ದೇಶದ ಅರಿವು ಇಂಥವರಿಗೆ ಇದೆಯೇ ಎನ್ನುವುದೇ ದೊಡ್ಡ ಪ್ರಶ್ನೆಯಾಗುತ್ತದೆ. ಇಂತಹ ಸಂಗೀತವು ನಮಗೆ ಬೇಕೇ? ಕೇವಲ ಚಪ್ಪಾಳೆಗಳೇ ಸಂಗೀತದ ಗುರಿಯಲ್ಲ ಎನ್ನುವುದು ಅರ್ಥವಾದಾಗ ಮಾತ್ರ ಮನಸ್ಸಿಗೆ ಒಪ್ಪುವ, ಹಿತವಾದ, ನೆಮ್ಮದಿಯ ಸಂಗೀತದ ಪ್ರಸ್ತುತಿ ಸಾಧ್ಯವಾಗುತ್ತದೆ.

ಭಾರತೀಯ ಶಾಸ್ತ್ರೀಯ ಸಂಗೀತವು ನಮ್ಮ ದೇಶದ ಸಂಸ್ಕೃತಿಯ ಪ್ರತಿನಿಧಿಯಾದ್ದರಿಂದ ಮುಖ್ಯವಾಗಿ ನಮ್ಮ ಸಾಂಸ್ಕೃತಿಕ ಮೌಲ್ಯಗಳು ಹಾಗೂ ಕಲೆಯ ಘನತೆ-ಗೌರವಗಳನ್ನು ಎತ್ತಿ ಹಿಡಿಯುವಲ್ಲಿ ಇದರ ಪಾತ್ರ ಬಹಳ ಹಿರಿದು. ಜ್ಞಾನಿಗಳೂ, ಹಿರಿಯ ವಿದ್ವಾಂಸರೂ ಆದ ಪದ್ಮಭೂಷಣ, ವಿದ್ವಾನ್ ಆರ್.ಕೆ.ಶ್ರೀಕಂಠನ್ ಅವರ ಮಾತಿನಲ್ಲಿ ಹೇಳುವುದಾದರೆ, "ಶಾಸ್ತ್ರೀಯತೆಯ ಗೌರವ, ಕಲಾವಿದರ ವ್ಯಕ್ತಿತ್ವ, ಕಲಾವಿದ ಹಾಗೂ ಶ್ರೋತೃಗಳ ಸಂಬಂಧ, ಇವೆಲ್ಲವೂ ಸಂಗೀತದಿಂದ ಉನ್ನತ ಮಟ್ಟಕ್ಕೆ ಬೆಳೆಯಬೇಕು, ಸಹೃದಯತೆಯೂ ಬೆಳೆಯಬೇಕು." [1] ಹಿರಿಯರ ಈ ಮಾತು ಎಲ್ಲ ಕಾಲಕ್ಕೂ ಸಲ್ಲುವಂಥದ್ದು. ಸಂಗೀತದಿಂದ ಆ ಸಮಯಕ್ಕೆ ಇಂದ್ರಿಯಗಳಿಗೆ ಮಾತ್ರ ಆನಂದವಾದರೆ ಸಾಲದು; ಆ ನಾದಾನುಭವದಿಂದ ಸ್ವತಃ ಕಲಾವಿದರಿಗೂ, ಸಹೃದಯ ಶ್ರೋತೃಗಳಿಗೂ, ಮಾನವೀಯ ಮೌಲ್ಯಗಳ ವೃದ್ಧಿಯಾಗಬೇಕೆಂಬುದೇ ಶಾಸ್ತ್ರೀಯ ಸಂಗೀತದ ಸದುದ್ದೇಶ ಎನ್ನುವುದು ಈ ಹಿರಿಯರ ಮಾತಿನ ತಾತ್ಪರ್ಯ.

ಇಂದಿನ ಸಂಗೀತ ವಿನಿಕೆಗಳಲ್ಲಿ ಮುಖ್ಯವಾಗಿ ಕಂಡುಬರುವ ಮೂರು ವಿಷಯಗಳೆಂದರೆ, ವೇಗ, ಕಿವಿಗಪ್ಪಳಿಸುವ ಧ್ವನಿವರ್ಧಕದ ಉಪಯೋಗ ಮತ್ತು ಹೆಚ್ಚಿನ ಶ್ರುತಿ. ಜೊತೆಗೆ ಕಲಾವಿದನು ನಾದಾನುಭವವನ್ನು ಪಡೆದು, ಅದನ್ನು ಶ್ರೋತೃಗಳಿಗೂ ತಲುಪಿಸುವ ಪ್ರಯತ್ನಕ್ಕೇ ಹೋಗದೆ, ರಚನೆಗಳ ಸಾಹಿತ್ಯದ ಸೌಂದರ್ಯಕ್ಕೂ ಗಮನ ಹರಿಸದೆ, ಆದಷ್ಟು ಬೇಗ ಕೃತಿಯನ್ನು ಹಾಡಿ ಮುಗಿಸಿ, ನೆರವಲ್ ಎನ್ನುವುದನ್ನು ನೆಪಮಾತ್ರಕ್ಕೆ ಮಾಡಿ, ಸ್ವರಕಲ್ಪನೆಗೆ ಧಾವಿಸುವುದು.! ತಮ್ಮ ವಿದ್ವತ್ತನ್ನೆಲ್ಲಾ ಸ್ವರಕಲ್ಪನೆಯಲ್ಲೇ ತೋರಿಸುವ ಅತಿ ಉತ್ಸಾಹದಲ್ಲಿ ಶ್ರೋತೃಗಳ ರಕ್ತದೊತ್ತಡ ಏರುವಷ್ಟು ವೇಗ, ಲೆಕ್ಕಾಚಾರಗಳ ಭರಾಟೆಯೊಂದಿಗೆ ಸ್ವರಕಲ್ಪನೆ ಮಾಡಿ, ಕೊನೆಯಲ್ಲಿ ಚಿತ್ರ ವಿಚಿತ್ರವಾದ ದೊಡ್ಡದೊಂದು ಮುಕ್ತಾಯವನ್ನೂ ಹಾಡಿ/ನುಡಿಸಿ ಗೆದ್ದೆನೆಂದರೆ, ಅಲ್ಲಿಗೆ ಜೀವನ ಸಾರ್ಥಕವೆಂಬ ಭಾವನೆ! ಶಾಸ್ತ್ರೀಯ ಸಂಗೀತದಿಂದ ಮನಸ್ಸಿಗೆ ಆಹ್ಲಾದ, ನೆಮ್ಮದಿಗಳು ಉಂಟಾಗಬೇಕೆಂಬ ಮಾತಿಗೆ ಇಲ್ಲಿ ಅರ್ಥವೇ ಇಲ್ಲ.!

ರಾಗ, ತಾನ, ಪಲ್ಲವಿಗಳು ಸ್ವಲ್ಪ ಕಾಲ ಮರೆಯಾಗಿದ್ದು ಈಚಿನ ದಿನಗಳಲ್ಲಿ ಮತ್ತೆ ಕಂಡುಬರುತ್ತಿರುವುದು ಒಳ್ಳೆಯ ವಿಚಾರ. ಆದರೆ ರಾಗಾಲಾಪನೆಯು ಪಲ್ಲವಿ ಗಾಯನಕ್ಕಾಗಿ ಮಾಡುವ ರೀತಿಯು ಹಿಂದಿನಂತಿಲ್ಲ. ಪಲ್ಲವಿಯ ಪ್ರಸ್ತುತಿಗೆ ಮುನ್ನ ವಿಸ್ತಾರವಾದ ಆಲಾಪನೆ ಮಾಡಬೇಕೆಂಬ ನಿಯಮವನ್ನು ಪೂರ್ವಾಚಾರ್ಯರು ಹೇಳಿದ್ದಾರೆ. ಇಲ್ಲಿ, "**ಅಕ್ಷಿಪ್ತಿಕ**- ಎಂದರೆ ರಾಗದ ಸಂಕ್ಷಿಪ್ತ ಹಾಗೂ ಮುಖ್ಯ ಅಂಶಗಳ ಪರಿಚಯ; **ರಾಗವರ್ಧನೀ** - ಎಂದರೆ ರಾಗದ ದೀರ್ಘವಾದ ವಿಸ್ತರಣೆಯ ಕ್ರಮ. ಮಂದ್ರ,ಮಧ್ಯ,ತಾರ ಸ್ಥಾಯಿಗಳಲ್ಲಿ ಸಂಚಾರ ಮಾಡಿ ವಿಸ್ತಾರವಾಗಿ ಆಲಾಪನೆ ಮಾಡುವ ಕ್ರಮ; **ವಿದಾರೀ** -ಎಂದರೆ ಪ್ರತಿ ಸ್ಥಾಯಿಯಲ್ಲೂ ಇರುವ ವಿಂಗಡನಾ ಕ್ರಮ; **ಸ್ಥಾಯೀ** - ಎಂದರೆ ರಾಗವರ್ಧನಿಯಲ್ಲಿ ಬರುವ ಪ್ರತೀ ಸ್ಥಾಯಿಯ ನಿಲುಗಡೆ; **ವರ್ತನೀ ಅಥವಾ ಮಕರಿಣೀ** -ಎಂದರೆ ಮಧ್ಯಮ ಕಾಲ ಅಥವಾ ತಾನದ ರೀತಿಯಲ್ಲಿ ಲಯಬದ್ಧವಾದ ಆಲಾಪನೆ; ಕೊನೆಯಲ್ಲಿ **ಮುಕ್ತಾಯೀ** - ಎಂದರೆ ರಾಗಾಲಾಪಣೆಯ ಮುಕ್ತಾಯದ ಭಾಗ. ಇಲ್ಲಿ ರಾಗದ ಎಲ್ಲ ಹಂತಗಳಲ್ಲೂ ಮತ್ತೊಮ್ಮೆ ಕ್ಲುಪ್ತವಾಗಿ ಸಂಚಾರ ಮಾಡಿ ಅವರೋಹಣ ಕ್ರಮದಲ್ಲಿ ಆಧಾರ ಷಡ್ಜಕ್ಕೆ ತಂದು ನಿಲ್ಲಿಸುವುದು."[2]

ಗೋವಿಂದ ದೀಕ್ಷಿತರ ಈ ಪದ್ಧತಿಯು ಈಗಲೂ ಪ್ರಚಲಿತವಿದೆ. ಆದರೆ ಇಷ್ಟು ದೀರ್ಘವಾದ ಆಲಾಪನೆಯು ಪಲ್ಲವಿ ಗಾಯನದಲ್ಲೂ ಈಗ ಕಾಣುವುದಿಲ್ಲ. ಕೆಲವು ದಶಕಗಳ ಹಿಂದೆ ಘನ ವಿದ್ವಾಂಸರು ಈ ರೀತಿ ಆಲಾಪನೆಯನ್ನು ಎರಡು ಹಂತದಲ್ಲಿ ಮಾಡುತ್ತಿದ್ದುದು ಉಂಟು. ಈಗಿನ ಕಛೇರಿಗಳು ಒಂದೂವರೆ ಗಂಟೆಗಳ ಕಾಲಾವಧಿಗೆ ಇಳಿದಿರುವುದರಿಂದ ಇಷ್ಟು ದೀರ್ಘವಾದ ಆಲಾಪನೆಯನ್ನು ನಿರೀಕ್ಷಿಸಲೂ ಸಾಧ್ಯವಿಲ್ಲವಾಗಿದೆ. ತಾನದ ಪ್ರಸ್ತುತಿಯಂತೂ ಬಹುತೇಕ ವೀಣೆಗೆ ಮಾತ್ರ ಸೀಮಿತವಾಗಿದೆ. "ಕ್ರಮಬದ್ಧವಾಗಿ ಆರೋಹಣ-ಅವರೋಹಣ ಕ್ರಮದಲ್ಲಿ ಚಂದದ ನಿಲುಗಡೆಗಳನ್ನು ಕೊಟ್ಟು ಹಾಡುವ ತಾನಗಳನ್ನು ಈಗ ಕೇಳಿಯೇ ಇಲ್ಲ. ಪಲ್ಲವಿ ನಿರೂಪಣೆಯಲ್ಲಿ ಕಡ್ಡಾಯವಾದ್ದರಿಂದ ಈಗೀಗ

ಕೇವಲ ಎರಡು, ಮೂರು ನಿಮಿಷಗಳಲ್ಲಿ ತಾನದ ಒಂದು ಸೂಚನೆ ಬರುವಷ್ಟು ಮಾತ್ರ ಹಾಡುತ್ತಾರೆ. ಈ ರೀತಿ ಹಾಡುವುದಕ್ಕಿಂತ ಸುಮ್ಮನಿರುವುದೇ ಲೇಸು" ಎಂದಿದ್ದಾರೆ ಆಕಾಶವಾಣಿಯ ನಿವೃತ್ತ ನಿರ್ದೇಶಕರಾಗಿದ್ದ ಶ್ರೀ ಎನ್.ಎಸ್.ಕೃಷ್ಣಮೂರ್ತಿ ಅವರು, ತಮ್ಮ ಒಂದು ಸಂದರ್ಶನದಲ್ಲಿ.

ನೆರವಲ್ ಎನ್ನುವುದು ತಾಳದ ಚೌಕಟ್ಟಿನಲ್ಲಿ ಮನೋಧರ್ಮವನ್ನು ವಿಸ್ತರಿಸುವ ಒಂದು ಭಾಗ. ಇದರ ಪ್ರಾಮುಖ್ಯತೆ ಹಿಂದೆ ಎಷ್ಟರಮಟ್ಟಿಗೆ ಇತ್ತೆಂದು ವಿವರಿಸುವಾಗ ಹಿರಿಯ ಸಂಗೀತ ವಿದುಷಿ ಕಲಾ ಆಚಾರ್ಯ ಶ್ರೀಮತಿ ನೀಲಾ ರಾಮಗೋಪಾಲ್ ಅವರು "ನಮ್ಮ ಕಾಲದಲ್ಲಿ ನೆರವಲ್ ಚೆನ್ನಾಗಿ ಮಾಡುವವನೇ ಉತ್ತಮ ಸಂಗೀತಗಾರ ಎನ್ನುವ ಅಭಿಪ್ರಾಯವಿತ್ತು" ಎಂದು ಅವರನ್ನು ಸಂದರ್ಶಿಸಿದಾಗ ಹೇಳಿದ್ದು ಉಂಟು. ನೆರವಲ್ ಪ್ರಸ್ತುತಿಗೆಂದೇ ಪ್ರಸಿದ್ಧರಾಗಿದ್ದ ಅನೇಕ ಹಿರಿಯ ವಿದ್ವಾಂಸರು ನಮ್ಮಲ್ಲಿ ಆಗಿ ಹೋಗಿದ್ದಾರೆ. ಉದಾಹರಣೆಗೆ, ವಿ॥ ಕೆ.ವಿ.ನಾರಾಯಣ ಸ್ವಾಮಿಯವರು, ವಿ॥ ಆರ್.ಕೆ.ಶ್ರೀಕಂಠನ್ ರವರು, ವಿ॥ ಚಿಂತಲಪಲ್ಲಿ ರಾಮಚಂದ್ರ ರಾಯರು, ವಿ॥ ಎಂ ಎಲ್ ವಸಂತಕುಮಾರಿ ಮುಂತಾದವರು, ಇವರೆಲ್ಲ ಹಾಡುತ್ತಿದ್ದ ನೆರವಲ್ ಗಳನ್ನು ಹಿರಿಯ ಶ್ರೋತೃಗಳು ಇಂದಿಗೂ ನೆನಪಿಸಿಕೊಳ್ಳುತ್ತಾರೆ. ಈಗ ನೆರವಲ್ ಎನ್ನುವುದರಲ್ಲಿ ಕಲಾವಿದರಿಗೂ ಆಸಕ್ತಿಯಿಲ್ಲ, ಶ್ರೋತೃಗಳಿಗೆ ಮೊದಲೇ ಇಲ್ಲ. ಹೀಗೆಯೇ ಇನ್ನೂ ಅನೇಕ ವಿಚಾರಗಳನ್ನು ಮಂಥನ ಮಾಡಿದರೆ, 5 ದಶಕಗಳ ಹಿಂದೆ ಇದ್ದ ಸಂಗೀತಕ್ಕೂ ಈಗಿನ ಸಂಗೀತಕ್ಕೂ ಬಹಳಷ್ಟು ವ್ಯತ್ಯಾಸಗಳು ಕಂಡುಬರುತ್ತವೆ. ಅಭಿವೃದ್ಧಿ ಎನ್ನುವ ಹೆಸರಿನಲ್ಲಿ ಹಳೆಯ ಒಳ್ಳೆಯ ವಿಚಾರಗಳನ್ನು ಬಿಟ್ಟುಬಿಡುವುದು ಎಷ್ಟು ಸರಿ? ಎಂಬ ಪ್ರಶ್ನೆಯೂ ಸಹೃದಯರನ್ನು ಕಾಡುತ್ತದೆ.

"2000 ವರ್ಷಗಳಿಗೂ ಹೆಚ್ಚು ಕಾಲದಿಂದ ಅಭಿವೃದ್ಧಿಗೊಂಡಿದ್ದ ಶಾಸ್ತ್ರೀಯ ಸಂಗೀತವು ದಿಢೀರನೆ ವ್ಯಾಪಾರದ ವಸ್ತುವಾಗಿ ಮಾರ್ಪಾಟಾಗಿಬಿಟ್ಟಿತು. ಹಿಂದಿನ ಅರ್ಪಣಾ ಭಾವ ಹಾಗೂ ಆದರ್ಶವಾದದ ಅರಿವಿಲ್ಲದ ಕುಶಲಕರ್ಮಿಗಳಾದ ಇಂದಿನ ಪೀಳಿಗೆಯವರಿಗೆ ಜನಪ್ರಿಯತೆ ಹಾಗೂ ಹಣ ಸಂಗ್ರಹಣೆಯ ಉದ್ದಿಶ್ಯವಿದ್ದು ಭವ್ಯ ಪರಂಪರೆಯ ಶಾಸ್ತ್ರೀಯ ಸಂಗೀತಕ್ಕೆ ವೃತ್ತಿ ಎಂಬ ಮುದ್ರೆ ಒತ್ತಲಾಯಿತು".[3] ಎಂದಿದ್ದಾರೆ ಪ್ರಸಿದ್ಧ ಸಂಗೀತ ಶಾಸ್ತ್ರಜ್ಞರಾದ ಶ್ರೀ ರಂಗ ರಾಮಾನುಜ ಅಯ್ಯಂಗಾರ್ ಅವರು. ಕಲೆಯು ವ್ಯಾಪಾರವಾದಾಗ ಅದರ ಗುಣಮಟ್ಟ ದಿನ ಕಳೆದಂತೆ ಕುಸಿಯುವುದೂ ನಿಜ. ಜೊತೆಗೆ ಇಂದಿನ ಶ್ರೋತೃಗಳಿಗೂ ಶಾಸ್ತ್ರೀಯ ಸಂಗೀತದ ಮೂಲ ರೂಪದ ಅರಿವೂ ಸಹ ಸಾಕಷ್ಟು ಇಲ್ಲದಿರುವುದೂ ಒಂದು ಕೊರತೆಯಾಗಿದೆ. "ಶ್ರೋತೃಗಳ ವಿಧಗಳು ಮುಖ್ಯವಾಗಿ ಹೀಗಿರುತ್ತವೆ: 1. ಸಂಗೀತ ಕೇಳ್ಮೆಯಲ್ಲಿ ಅನುಭವ ಗಳಿಸಿದ ವಿದಗ್ಧ ಶ್ರೋತೃಗಳು, 2.ಸಂಗೀತದ ವಾತಾವರಣದಲ್ಲಿ ಕಾಲಕ್ಷೇಪ ಮಾಡಬಯಸುವ ಹಾಗೂ ರಸಿಕ ಜನರ ನಡುವೆ ತಮ್ಮ ಸ್ಥಿತಿಯನ್ನು ಗುರುತಿಸಿಕೊಳ್ಳಲು ಬಯಸುವವರು, 3. ಸಂಗೀತಾಭ್ಯಾಸಿಗಳು ಹಾಗೂ ಕುತೂಹಲಿಗಳು,4.ವಿಮರ್ಶಕರು."[4] ಇಂತಹ ವಿವಿಧ ಮನಸ್ಥಿತಿಯ ಜನರು ಇರುವಾಗ, ಎಲ್ಲ ರೀತಿಯ ಶ್ರೋತೃಗಳಿಗೂ ತೃಪ್ತಿಯಾಗುವಂತೆ ಒಂದು ವಿನಿಕೆ ನಡೆಸಿಕೊಡುವುದೂ ಕಲಾವಿದರಿಗೆ ಸವಾಲೇ ಆಗಿರುತ್ತದೆ. ಇದೆಲ್ಲದರ ಮಧ್ಯೆ ಶಾಸ್ತ್ರೀಯತೆಯನ್ನು ಉಳಿಸಿಕೊಂಡು ಬರುವುದರಲ್ಲಿ ಕಲಾವಿದರ ಜಾಣ್ಮೆ ಇರಬೇಕಾಗುತ್ತದೆ.

ದೇಶಾದ್ಯಂತ ಬಹುತೇಕ ಎಲ್ಲ ರಾಜ್ಯಗಳ ನಗರಗಳಲ್ಲೂ ಅನೇಕ ಸಂಗೀತ ಸಭೆಗಳು ಇರುವ ಈ ಸಮಯದಲ್ಲಿ ಹೆಚ್ಚಿನ ಕಲಾವಿದರಿಗೆ ಹೇರಳವಾಗಿ ಅವಕಾಶಗಳು ದೊರೆಯುತ್ತಿವೆ, ಹಾಗೂ, ಇಂದಿನ ಯುವಕಲಾವಿದರೂ ಸಹ ಹೆಚ್ಚಿನಂಶ ಪದವೀಧರರೇ ಆಗಿದ್ದು ಒಳ್ಳೆಯ ಉದ್ಯೋಗಸ್ಥರೇ ಆಗಿರುತ್ತಾರೆ. ಜೀವನೋಪಾಯಕ್ಕೆ ಸಂಗೀತವನ್ನೇ ಅವಲಂಬಿಸುವ ಪರಿಸ್ಥಿತಿಯೇನೂ ಇಂದು ಇದ್ದಂತಿಲ್ಲ. ಹೀಗಿರುವಾಗ ಸಂಗೀತವನ್ನು ವ್ಯಾಪಾರೀಕರಣ ಮಾಡದೆ ಭವ್ಯ ಪರಂಪರೆಯ ಸಂಗೀತದ ಮೂಲ ಉದ್ದೇಶವಾದ ಅಧ್ಯಾತ್ಮವನ್ನು ಬೆಳೆಸಿಕೊಳ್ಳಬಾರದೇಕೆ? ಅಭಿವೃದ್ಧಿಯಿಂದ, ಹೊಸ ರಚನೆಗಳು ಹಾಗೂ ಹೊಸ ಪ್ರಯೋಗಗಳೇ ಮುಂತಾದವುಗಳಿಂದ ಸಂಗೀತದ ಹರವು ವಿಸ್ತಾರವಾಗುತ್ತದೆಯಾದರೂ, ಅಭಿವೃದ್ಧಿಯ ಹೆಸರಿನಲ್ಲಿ ಪರಂಪರೆಯನ್ನು ಕಡೆಗಣಿಸಿಬಿಡುವುದು ಸರಿಯಲ್ಲ ಎನ್ನುವುದು ಅನೇಕ ಹಿರಿಯರ ಅಭಿಪ್ರಾಯವಾಗಿದೆ. ನಿಯಮಗಳನ್ನು ಕೊಂಚ ಬಾಗಿಸಬಹುದೇ ಹೊರತು ಮುರಿಯಬಾರದು ಎನ್ನುವ ಅರಿವು ಇದ್ದಾಗ ಪರಂಪರೆ, ಪದ್ಧತಿ, ಎಲ್ಲವೂ ಆರೋಗ್ಯಕರ ಬೆಳವಣಿಗೆಯನ್ನು ಕಾಣಲು ಸಾಧ್ಯ. ಬೆಳವಣಿಗೆ, ತನ್ಮೂಲಕ ಬದಲಾವಣೆ-ಪರಿವರ್ತನೆಗಳು ಸಹಜ. ಆದರೆ ಇದರಿಂದ ಗುಣಮಟ್ಟ ಹೆಚ್ಚಾಗಬೇಕೇ ವಿನಃ ಪತನವಾಗಬಾರದು. "ಭಾರತೀಯ ಸಂಸ್ಕೃತಿಯು ಇಂದು ಒಂದು ಪರ್ವಕಾಲದಲ್ಲಿದೆ. ಏಕೆಂದರೆ ಇಂದಿನ ಹಿರಿಯರ ತಲೆಮಾರಿಗೂ, ಯುವಜನಾಂಗದ ತಲೆಮಾರಿಗೂ ನಡುವೆ ಒಂದು ಬಿರುಕು ಕಂಡುಬರುತ್ತಿದೆ. ಈ ವಿಚ್ಛಿನ್ನತೆಯು ಜೀವನ ದೃಷ್ಟಿ, ಧ್ಯೇಯ, ಮೌಲ್ಯ, ಇವೆಲ್ಲದರಲ್ಲಿಯೂ ಸ್ಪಷ್ಟವಾಗಿ ಕಂಡು ಬರುತ್ತಿದೆ. ಈ ಅಪಾಯಕಾರಿಯಾದ ತೆರಪಿನಿಂದಾಗಿ ಯುವಜನಾಂಗದಲ್ಲಿ ಅಶಿಸ್ತು, ಅತೃಪ್ತ ಉದ್ರೇಕ, ಶೀಘ್ರ ಸುಖಾಭಿಲಾಷೆ, ಸದ್ಯಃ ಫಲಾಕಾಂಕ್ಷೆ ಹೆಚ್ಚುತ್ತಿವೆ. ಇಂಥವುಗಳಿಂದ ಅವರನ್ನು ವಿಮುಖರನ್ನಾಗಿಸಿ ಶಾಶ್ವತ ಸುಖ, ಸೌಂದರ್ಯ, ಪ್ರಯೋಜನಗಳುಳ್ಳ ಮೌಲ್ಯಗಳೆಡೆಗೆ ಆಕರ್ಷಿಸುವುದು ಇಂದಿನ ನಮ್ಮ ಅತ್ಯಂತ ತುರ್ತು ಕರ್ತವ್ಯಗಳಲ್ಲಿ ಒಂದಾಗಿದೆ"[5] ಎಂದಿದ್ದಾರೆ ಮಹಾಮಹೋಪಾಧ್ಯಾಯ ಡಾ। ರಾ. ಸತ್ಯನಾರಾಯಣ ಅವರು. ಜೊತೆಗೆ ನಮ್ಮ ಶಾಸ್ತ್ರೀಯ ಸಂಗೀತದ ಮೌಲ್ಯಗಳ ಕಡೆಗೆ ಇಂದಿನ ಶ್ರೋತೃಗಳ ಗಮನ ಸೆಳೆಯುವ ಪ್ರಯತ್ನವೂ ಆಗಬೇಕಾಗಿದೆ. ಶಬ್ದಕ್ಕೆ ಹಾಗೂ ವೇಗಕ್ಕೆ ಇಚ್ಛೆಯಿಂದಲೋ, ಕಡ್ಡಾಯವಾಗಿಯೋ ಹೊಂದಿಕೊಂಡಿರುವ ಅವರ ಕಿವಿಗಳನ್ನು ಮತ್ತೆ ನಾದ, ಸೂಕ್ಷ್ಮತೆಗಳ ಕಡೆಗೆ ಹಿಂತಿರುಗಿ ಬರುವಂತೆ ಮಾಡಬೇಕಾಗಿದೆ. ಸಂಗೀತವೆಂದರೆ ಕೇವಲ ಮನರಂಜನೆಯಲ್ಲ; ಅದರ ಉದ್ದೇಶ ಬಹಳ ಉನ್ನತವಾದದ್ದು ಎನ್ನುವ ಅರಿವನ್ನು ಮೂಡಿಸಬೇಕಿದೆ. ಈ ಕಾರ್ಯಕ್ಕೆ ಕಲಾವಿದರು ಹಾಗೂ ಶ್ರೋತೃಗಳು- ಇಬ್ಬರ ನಡುವಿನ ಸಂಬಂಧ, ಸಹಕಾರಗಳು ಅತಿ ಆವಶ್ಯಕ.

## ಸಮಾರೋಪ:

ಶತಮಾನಗಳಿಂದ ಆಯಾ ಕಾಲಕ್ಕೆ ತಕ್ಕಂತೆ ಬದಲಾವಣೆಯನ್ನು ಆರೋಗ್ಯಕರ ರೀತಿಯಲ್ಲಿ ಹೊಂದುತ್ತಾ ಬೆಳೆಯುತ್ತಾ ಬಂದಿರುವ ನಮ್ಮ ಶ್ರೀಮಂತ ಪರಂಪರೆಯ ಶಾಸ್ತ್ರೀಯ ಸಂಗೀತದ ಬೇರುಗಳನ್ನೇ ಕಿತ್ತುಹಾಕಿ ಮುಂದಕ್ಕೆ ಬೆಳೆಸುವ ಪ್ರಯತ್ನ ಎಂದಿಗೂ ಫಲ ಕೊಡುವುದಿಲ್ಲ. ಹೊಸ ಹೊಸ ಪ್ರಯೋಗಗಳನ್ನು ಮಾಡುವ ಉತ್ಸಾಹಿಗಳು ಇದನ್ನು ಗಮನದಲ್ಲಿಟ್ಟುಕೊಂಡು ತಮ್ಮ ಸಂಗೀತ ಜೀವನವನ್ನು ನಡೆಸುವುದೂ, ಬೆಳವಣಿಗೆಯನ್ನು ಮಾಡಿಕೊಳ್ಳುವುದೂ ಸೂಕ್ತ ಎನ್ನುವುದು ಅನೇಕ ಹಿರಿಯರ ಅಭಿಪ್ರಾಯ ಹಾಗೂ ಕಿರಿಯರಿಗೆ ಕೊಡುವ ಕಿವಿಮಾತು. ನಮ್ಮಲ್ಲಿ ಪ್ರತಿಭಾವಂತ ಯುವ ಕಲಾವಿದರಿಗೆ ಖಂಡಿತವಾಗಿಯೂ ಕೊರತೆಯಿಲ್ಲ. ಆದರೆ ತಮ್ಮ ಪ್ರತಿಭೆಯನ್ನು ಸಂಗೀತದ ಶಾಸ್ತ್ರೀಯತೆಯನ್ನೂ, ಸಂಸ್ಕೃತಿಯನ್ನೂ ಉಳಿಸಿ ಬೆಳೆಸುವಲ್ಲಿ ಬಳಸಿದರೆ ನಮ್ಮ ಭವ್ಯ ಪರಂಪರೆಯು ಮುಂದಕ್ಕೂ ಶ್ರೀಮಂತವಾಗಿಯೇ ಇರುತ್ತದೆ. ಹಾಗೆಯೇ ಈ ನಿಟ್ಟಿನಲ್ಲಿ ಕಲಾವಿದರಿಗೆ ಇರುವಷ್ಟೇ ಜವಾಬ್ದಾರಿ ಶ್ರೋತೃಗಳಿಗೂ ಇರುತ್ತದೆ ಎನ್ನುವುದೂ ಗಮನಿಸಬೇಕಾದ ಅಂಶ.

## ಆಕರಗಳು ಮತ್ತು ಉಲ್ಲೇಖಗಳು :


1. ಆರ್. ಕೆ. ಶ್ರೀಕಂಠನ್ - “ಮುರಳಿವಾಣಿ” ಬಿ ವಿ ಕೆ ಶಾಸ್ತ್ರೀ ಅಭಿನಂದನಾ ಗ್ರಂಥ, ಪು/740
2. ಪ್ರೊ. ಆರ್ ವಿಶ್ವೇಶರನ್ - “ರಾಗಾಲಾಪನೆ-ಅಂದು, ಇಂದು” ಗಾನಕಲಾ ಮಂಜರಿ ಸಂ.1, ಪು/466-472, 474
3. ರಂಗರಾಮಾನುಜ ಅಯ್ಯಂಗಾರ್ - “ಕರ್ನಾಟಕ ಸಂಗೀತ- ಇಂದಿನ ಸ್ಥಿತಿಗತಿ” ಗಾನಕಲಾ ಮಂಜರಿ ಸಂ.2, ಪು/436-437
4. ಡಾ। ಪಿ ಎಸ್ ರಾಮನುಜಂ - “ಶ್ರೋತೃ : ಅಂದು-ಇಂದು” ಗಾನಕಲಾ ಮಂಜರಿ ಸಂ.2, ಪು/393
5. ಡಾ। ರಾ. ಸತ್ಯನಾರಾಯಣ - “ಸಂಗೀತ ಶಿಕ್ಷಣ ಮತ್ತು ಸಂಗೀತೋಪಾಧ್ಯಾಯರ ತರಪೇತು ಮತ್ತು ಸಲಹೆಗಳು” -ಗಾನಕಲಾ ಮಂಜರಿ ಸಂ.2, ಪು/415
6. ಇತರ ಗ್ರಂಥಗಳು: ಮದ್ರಾಸ್ ಮ್ಯೂಜಿಕ್ ಅಕಾಡೆಮಿಯ ಜರ್ನಲ್ ಗಳು, “ಗಾನ ವಿಹಾರ”- ಎ ಎನ್ ಮೂರ್ತಿರಾವ್ -(1995) ಪ್ರ: ಡಿ ವಿ ಕೆ ಮೂರ್ತಿ, ಮೈಸೂರು, “ಕರ್ನಾಟಕ ಸಂಗೀತ ದರ್ಪಣ”- ಭಾಗ 1 ರಿಂದ 5, ತಿರುಮಲೈ ಸಹೋದರಿಯರು. ಪ್ರ: ಶ್ರೀನಿವಾಸ ಪ್ರಕಾಶನ ಬೆಂಗಳೂರು, “ಕರ್ನಾಟಕ ಸಂಗೀತ ವಾಹಿನಿ” ಡಾ। ರಾ. ಸತ್ಯನಾರಾಯಣ (1980) ಪ್ರ: ಕನ್ನಡ ಪುಸ್ತಕ ಪ್ರಾಧಿಕಾರ, ಕರ್ನಾಟಕ ಸರ್ಕಾರ